ಸಾಕ್ಷಿಯನ್ನು ದಿನಾಂಕಃ 16/07/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ**

ನನಗೆ ಇಬ್ಬರು ಜನ ಸಹೋದರಿಯರು, ಅವರ ಮದುವೆ ಯಾಗಿ ಗಂಡನ ಮನೆಯಲ್ಲಿ ಇದ್ದಾರೆ. ಈಗ ನಾನು ಮತ್ತು ನನ್ನ ತಾಯಿ ಗದಗದಲ್ಲಿ ವಾಸವಾಗಿದ್ದೇವೆ. ಪ್ರವೀಣ ನನ್ನ ಮಾವ (ತಂದೆಯ ಅಕ್ಕನ ಮಗ) ಆಗಬೇಕು. ಅವರು ನಿಮ್ಮ ದಲ್ಲಾಳಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಪ್ರವೀಣರವರು ಜ್ಯುವೆಲರಿ ಶಾಪ್ ನೆಡೆಸುತ್ತಾರೆ. ಸದರಿ ಪ್ರವೀಣ ರವರೆ ಸ್ವತಹಃ ಅಂಗಡಿ ನೆಡೆಸುತ್ತಾರೆ.

ನಿಪಿಃ 17 ರಲ್ಲಿ asset list ನಲ್ಲಿ cash in hand ರೂ.30,000/- ಎಂದು ಬರೆಸಿದ್ದೀರಿ ಎಂದರೆ ಸರಿ. ಅದೇ ರೀತಿ ಅದರ ಜೊತೆ liability list ನಲ್ಲಿ ಪಿ ಕೆ ವಜ್ರೇಶ್ವರಿ ರೂ.4,50,000/- ಮತ್ತು ವಿನಾಯಕ ವಜ್ರೇಶ್ವರಿ ರೂ.11,35,000/- ಬರೆಯಲಾಗಿದೆ ಎಂದರೆ ಸರಿ. ನೀವು ದಿನಾಲೂ ಅಕೌಂಟ್ ಬುಕ್ ನ್ನು ಬರೆದು ಇಡುತ್ತೀರಿ ಎಂದರೆ ಸರಿ. ನಿಮ್ಮ ತಂದೆಯವರು ಇದ್ದಾಗಲೂ ಸಹ ಮಾಡುತ್ತಿದ್ದರೂ ಈಗಲೂ ಅದನ್ನು ಮುಂದುವರೆಸಿಕೊಂಡು ಮಾಡುತ್ತೀರಿ ಎಂದರೆ ಸರಿ. ಸದರಿ ಅಕೌಂಟ್ ಬುಕ್ಕ ನಲ್ಲಿ ಎಷ್ಟು ಸಂಬಳ ಕೊಟ್ಟೀರಿ, ಎಷ್ಟು ಹಣ ಬಂತು, ಎಷ್ಟು ಖರ್ಚಾಯಿತು ಮತ್ತು ಎಷ್ಟು ಉಳಿಯಿತು ಎಂದು ಎಲ್ಲವನ್ನು ಬರೆಯುತ್ತೀರಿ ಎಂದರೆ ಸರಿ. 2011-12, 2012-13 ರ ಅಕೌಂಟ ಬುಕ್ಕನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ತೊಂದರೆ ಇಲ್ಲ. ಪ್ರತಿವಾದಿಗೆ ರೊಕ್ಕ ಕೊಟ್ಟಿಲ್ಲ ಎಂದು ಗೊತ್ತಾಗುತ್ತದೆ ಎಂದು ಸದರಿ ಅಕೌಂಟ್ ಬುಕ್ಕನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಆದಾಯ ತೆರಿಗೆ ತುಂಬುತ್ತಿದ್ದರು. 2011-12, 2012-13 ಆದಾಯ ತೆರಿಗೆ ತುಂಬಿದ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ತೊಂದರೆ ಇಲ್ಲ. ಇಲ್ಲಿಯವರೆಗೆ ಸದರಿ ದಾಖಲಾತಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಗೆ 10 ಲಕ್ಷ ಕೊಟ್ಟಿದ್ದ ಬಗ್ಗೆ ನಿಮ್ಮ ತಂದೆ ತಮ್ಮ ಆದಾಯ ತೆರಿಗೆಯಲ್ಲಿ ತೋರಿಸಿದ್ದಾರಾ ಎಂದರೆ ತೋರಿಸಿಲ್ಲ ಎಂದು ಹೇಳುತ್ತಾರೆ. ನಿಮ್ಮ

ತಂದೆಯವರು ಈ ರೀತಿ ಪ್ಲಾಟು ಖರೀದಿಸಲು ಅಗ್ರಿಮೆಂಟ್ ಮಾಡಿಕೊಂಡ ಬಗ್ಗೆ assets and liabilities ನಲ್ಲಿ ತೋರಿಸಿರುವುದಿಲ್ಲ. ಪ್ರತಿವಾದಿಗೆ ಯಾವುದೇ ಹಣ ಕೊಟ್ಟಿಲ್ಲ, ಆದ್ದರಿಂದ ನಿಮ್ಮ ತಂದೆಯವರು assets and liabilities ನಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರ ತೋರಿಸುವುದಿಲ್ಲ ಕ್ರಯ ಆದರೆ ಮಾತ್ರ assets and liabilities ನಲ್ಲಿ ತೋರಿಸುತ್ತೇವೆ ಎಂದು ಹೇಳುತ್ತಾರೆ. ಕ್ರಯ ಕರಾರು ಪತ್ರ ಆದರೆ ತೋರಿಸಬಾರದು ಎಂದು ಕಾನೂನಿನಲ್ಲಿ ಆ ರೀತಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ತೋರಿಸಿಕೊಂಡಿಲ್ಲ ಎಂದು ಹೇಳುತ್ತಾರೆ.

ಕ್ರಯ ಕರಾರು ಪತ್ರ ಆಗುವುದಕ್ಕಿಂತ ಮೂರು ನಾಲ್ಕು ವರ್ಷಗಳಿಂದ ಪ್ರತಿವಾದಿಗಳು ನನ್ನ ತಂದೆಗೆ ಪರಿಚಯ. ಕ್ರಯ ಕರಾರು ಪತ್ರ ಆಗಿದೆ ಎಂದು ಹೇಳುವುದಕ್ಕಿಂತ ಮುಂಚೆ ಯಾರು ಬಂದು ಮಾರಾಟ ಮಾಡುವುದು ಇದೆ ಎಂದು ಯಾರು ಹೇಳಿದರು ಎಂದುಕೇಳಲಾಗಿ ಸಾಕ್ಷಿ ನನ್ನ ದೊಡ್ಡಪ್ಪನ ಮನೇಯ ಹತ್ತಿರ ಪ್ರತಿವಾದಿಯ ಮನೆ ಇದೆ, ಪ್ರತಿವಾದಿ ನನ್ನ ದೊಡ್ಡಪ್ಪ ನಿಗೆ ಹೇಳಿದರು ಮತ್ತು ನನ್ನ ತಂದೆಯ ಜೊತೆ ಮಾತನಾಡಿದರು ಎಂದು ಹೇಳುತ್ತಾರೆ. ಸದರಿ ಮಾರಾಟ ಮಾಡುವುದು ಇದೆ ಎಂದು ಯಾವಾಗ ಹೇಳಿದರು ಎಂದು ಕೇಳಲಾಗಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ವ್ಯವಹಾರವು ದಿನಾಂಕ 14/12/2012 ರಲ್ಲಿ ಆಗಿದೆ. ವ್ಯವಾಹರ ಆಗುವುದಕ್ಕಿಂತ ಮುಂಚೆ ಮಾತು ಕತೆ ಎಲ್ಲಿ ಮತ್ತು ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ಯಾರು ಯಾರು ಇದ್ದರು ಎಂದು ಕೇಳಲಾಗಿ ಸಾಕ್ಷಿ ನಮ್ಮ ತಂದೆ ಮತ್ತು ಪ್ರವೀಣ ವಾರಕಾರ್ ರವರು ಇದ್ದರು ಎಂದು ಹೇಳುತ್ತಾರೆ. ಮಾತುಕತೆ ಎಲ್ಲಿ ಆಯಿತು ಎಂದು ನನಗೆ ಗೊತ್ತಿಲ್ಲ.

ನಿಮ್ಮ ಪ್ರಮಾಣ ಪತ್ರದ 6 ನೇ ಪ್ಯಾರಾದಲ್ಲಿ ಪ್ಲಾಟನಲ್ಲಿ ಮನೆ ಕಟ್ಟಬೇಕು ಎಂದು ನನ್ನ ತಂದೆ ಇಚ್ಚೆ ಮಾಡಿದ್ದರು ಎಂದು ಬರೆದಿದ್ದೀರಿ ಈ ವಿಷಯ ವಾದ ಪತ್ರ ಮತ್ತು ನೋಟಿಸನಲ್ಲಿ ಬರೆದಿಲ್ಲ ಎಂದರೆ ಸರಿ, ಆದರೆ ಬಾಯಿಂದ ಹೇಳಿದ್ದರು ಎಂದು ಹೇಳುತ್ತಾರೆ. ಆ ರೀತಿ ನಿಮ್ಮ ತಂದೆಯವರು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರ ನಿಮ್ಮ ತಂದೆಯ ಒಬ್ಬರ ಹೆಸರಿನಲ್ಲಿ ಇದೆ ಎಂದರೆ ಸರಿ. ಬ್ಯಾಲೆನ್ಸ ಶೀಟ್ ನ್ನು ಗಣೇಶ ಟ್ರೇಡಿಂಗ್ ಕಂಪನಿಯೆಂದು ತೋರಿಸಿದ್ದೀರಿ ಎಂದರೆ ಸರಿ. ನೀವು ಹಾಜರು ಪಡಿಸಿದ ದಾಖಲಾತಿಗಳಲ್ಲಿ 10 ಲಕ್ಷ ರೂಪಾಯಿ ಕೊಟ್ಟಿದ್ದೇವೆ ಎಂದು ತೋರಿಸಲು ಅಥವಾ ಬ್ಯಾಂಕಿನಿಂದ ಸದರಿ ಹಣ ತೆಗೆಸಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನಿಮ್ಮ ಬಳಿ 10 ಲಕ್ಷ ಹಣ ಇರಲಿಲ್ಲ ಆದ್ದರಿಂದ ದಾಖಲಾತಿ ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ನಮ್ಮ ಬಳಿ cash transaction ಇದ್ದೆ ಇರುತ್ತದೆ ಎಂದು ಹೇಳುತ್ತಾರೆ. cash transaction ಇರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ. ನಿಮ್ಮ ತಂದೆಯವರು 10 ಲಕ್ಷ ರೂಪಾಯಿ ನಗದು ಹಣ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೀರಿ ಅವರಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕ್ರಯ ಕರಾರು ಪತ್ರದ ಬಾಂಡನಲ್ಲಿ ಬರೆಯಲಾಗಿದೆ ಎಂದು ಹೇಳುತ್ತಾರೆ. ಸದರಿ 10 ಲಕ್ಷ ಎಲ್ಲಿಂದ ತಂದೀರಿ ಎಂದು ಕೇಳಲಾಗಿ ಸಾಕ್ಷಿ ನಮ್ಮ ತಂದೆಯವರಿಗೆ ಗೊತ್ತು ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಎಮ್ ಬಿ ಎ ಪಧವಿದರನಾಗಿದ್ದು, ಅದು 2018 ರಲ್ಲಿ ಮುಗಿದಿದೆ ಎಂದು ಹೇಳುತ್ತಾರೆ. ನಾನು ದಿನಾಲೂ ಕಾಲೇಜಿಗೆ ಹೋಗುತ್ತಿದ್ದೆ. ಸಾಕ್ಷಿ ಮುಂದುವರೆದು 2020 ರಲ್ಲಿ ಎಮ್ ಬಿ ಎ ಪದವಿ ಮುಗಿದಿದೆ ಎಂದು ಹೇಳುತ್ತಾರೆ. ಪದವಿ ಪಡೆದ ನಂತರ ನಾನು ಅಂಗಡಿ ನೆಡೆಸಲು ಪ್ರಾರಂಭಿಸಿದೆ ಎಂದರೆ ಸರಿ. ನಿಮ್ಮ ತಂದೆಯವರು ಸಾಕ್ಷಿ ಹೇಳಲು ಬಂದಿರುವುದಿಲ್ಲ. ನಿಮ್ಮ ತಾಯಿ ಬರಬಹುದಾಗಿತ್ತು ಎಂದರೆ ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ ಗುಜರಾತಿ ಮತ್ತು ಮರಾಠಿ ಭಾಷೆ ಮಾತನಾಡುತ್ತಾರೆ. ನನ್ನ ಸಹೋದರಿಯರು ವಿದ್ಯಾಭ್ಯಾಸ

ಮಾಡುತ್ತಿದ್ದರಿಂದ, ಆದ್ದರಿಂದ ಅವರು ನ್ಯಾಯಾಲಕ್ಕೆ ಬಂದು ಸಾಕ್ಷಿ ಹೇಳಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆ ಹಣ ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ, ಆ ಹಣವನ್ನು ಎಲ್ಲಿ ಮತ್ತು ಸದರಿ ನೋಟಿನ ಮುಖಬೆಲೆ ಕೇಳಲಾಗಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನಗೆ ಆಗಲಿ ನನ್ನ ತಂದೆಗಾಗಲಿ ಜಿ ವಾಯ್ ಹೊಸಮನಿಯವರ ಪರಿಚಯ ಇಲ್ಲ. ಸದರಿ ಜಿ ವಾಯ್ ಹೊಸಮನಿಯವರ ವಿರುದ್ಧ 5-6 ಕೇಸುಗಳು ನ್ಯಾಯಾಲಯದಲ್ಲಿ ನೆಡೆಯುತ್ತಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಿ ವಾಯ್ ಹೊಸಮನಿಯವರ ವಿರುದ್ಧ ಪ್ರಕಾಶ ಎಸ್ ಹತ್ತಿಕಾಳ ರವರು ಕಲಂ 138 ಎನ್ ಐ ಆ್ಯಕ್ಟ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು, ಸದರಿ ಪ್ರಕರಣದಲ್ಲಿ ಪ್ರವೀಣ ವಾಲಕರ್ ಎಂದರೆ ಈ ದಾವೆಯ ಪಿ.ಡಬ್ಲ್ಯೂ1 ಸಾಕ್ಷಿ ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಜಿ ವಾಯ್ ಹೊಸಮನಿಯವರ ವಿರುದ್ಧ ವಿಜಯಸಿಂಗ್ ಡಿ ಬ್ಯಾಳಿ ರವರು ಸಿಸಿ ನಂ.1136/2015 ಪ್ರಕರಣ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಜಿ ವಾಯ್ ಹೊಸಮನಿಯವರನ್ನು ಸಾಕ್ಷಿ ಮಾಡಿಸಲು ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿ ನನಗೆ ಪರಿಚಯ ಇಲ್ಲ ಎಂದು ಹೇಳುತ್ತಾರೆ. ಪ್ರವೀಣ ವಾರಕರ್ ರವರ ಪರಿಚಯ ನನಗೆ ಇದೆ. ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿಸಲು ನಾನು ಮತ್ತು ನನ್ನ ತಂದೆ ಪ್ರಯತ್ನ ಮಾಡಿರುವುದಿಲ್ಲ. ಜಿ ವಾಯ್ ಹೊಸಮನಿಯವರನ್ನು ಸಾಕ್ಷಿ ಮಾಡಿಸಿದರೆ ಸತ್ಯ ಹೊರಗೆ ಬರುತ್ತದೆ ಎಂದು ಸಾಕ್ಷಿ ಮಾಡಿಸಿಲ್ಲ ಎಂದರೆ ಸಾಕ್ಷಿ ಅವರ ಪರಿಚಯ ಇಲ್ಲ ಎಂದು ಹೇಳುತ್ತಾರೆ.

ಖರೀದಿ ಕರಾರು ಪತ್ರ ಮಾಡಿಕೊಂಡಿದ್ದೇವೆ ಎಂದು ಹೇಳುವಾಗ ನಿಮ್ಮ ತಂದೆಯವರು ಏನು ದಾಖಲಾತಿ ನೋಡಿದರು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಅಸ್ತಿ ಖರೀದಿಸುವಾಗ ಏನೆನೂ ದಾಖಲಾತಿ ನೋಡುತ್ತೀರಿ ಎಂದು ಕೇಳಲಾಗಿ ಸಾಕ್ಷಿ ಪ್ಲಾಟಿನ ಉತಾರ, ಡ ಉತಾರ, ಫಾರ್ಮ ನಂ.3 ನೋಡುತ್ತೇವೆ ಎಂದು ಹೇಳುತ್ತಾರೆ. ಲೋನ್ ಇತ್ತು ಎಂದರೆ ಹೇಗೆ ಗೊತ್ತಾಗುತ್ತದೆ ಎಂದು ಕೇಳಲಾಗಿ ಡ ಉತಾರ ನೋಡಿದರೆ

ಗೊತ್ತಾಗುತ್ತದೆ ಎಂದು ಹೇಳುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ವಾರಸಾ ನಾತೆಯಿಂದ ಕುಟುಂಬದ ಸದಸ್ಯರು ಹೆಸರುಗಳನ್ನು ನನ್ನ ತಂದೆಯ ಆಸ್ತಿಗೆ ಅಂದರೆ ಪ್ಲಾಟ್ಸಗಳು ಮತ್ತು ಮನೆಗೆ ಹೆಸರು ಹಚ್ಚಿಕೊಂಡಿದ್ದೇವೆ. ನನಗೆ ಒಟ್ಟಾರೆ ಅಲ್ಲಿ ಯಾರು ಯಾರು ಇದ್ದರು, ಯಾರು ಹಣ ಕೊಟ್ಟರು ಎಂದು ನನಗೆ ಗೊತ್ತಿಲ್ಲ.

**ಮುಂದಿನ ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು , ಆಲಿಸಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
16.07.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**